OS No. 11/2024
DW-3

**(ಇಂದು ದಿಃ 05-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ವಾದಿ ಪರ ಶ್ರೀ.TVP ವಕೀಲರಿಂದಃ-</u>**

ನಾನು ವ್ಯವಸಾಯ ಮಾಡುತ್ತೇನೆ. ನಾನು ಸಟಪಟನಹಳ್ಳಿಯಲ್ಲಿ ವಾಸವಿರುತ್ತೇನೆ. ನಾನು ನನ್ನ ಜೀವನದಲ್ಲಿ ಈ ದಾವೆಯಲ್ಲಿ ಮಾತ್ರ ಮೊದಲ ಬಾರಿ ಸಾಕ್ಷಿ ಹೇಳುತ್ತಿದ್ದೇನೆ. ನಾನು ಸಿವಿಲ್ ಜಡ್ಜ ಮತ್ತು ಜೆ. ಎಮ. ಎಪ. ಸಿ ಸೇಡಂ ನ್ಯಾಯಾಲಯದ ಲ್ಲಿ ಅಸಲು ದಾವಾ ನಂಬರ 53/2017 ಸಾಕ್ಷಿ ಹೇಳಿದ್ದೇನೆ ಎಂದರೆ ಸರಿ. ಅದೇ ರೀತಿ ಚಿಂಚೋಳಿಯ ಸಿವಿಲ್ ಜಡ್ಜ ಮತ್ತು ಜೆ. ಎಮ. ಎಪ. ಸಿ ನ್ಯಾಯಾಲಯದ ಲ್ಲಿ ಅಸಲುದಾವಾ ನಂಬರ 187/2022 , 121/2022 ರಲ್ಲಿ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿ. ಇಲ್ಲಿಯವರೆಗೆ ನಾನು ಕನಿಷ್ಟ 8 – 10 ಪ್ರಕರಣಗಳಲ್ಲಿ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿ. ನಾನು ಪ್ರತಿವಾದಿಯರಿಂದ ಹಣ ಪಡೆದುಕೊಂಡು ಅವರ ಪರವಾಗಿ ಅವರು ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಂಗಮ್ಮ ಕುಟುಂಬದ ಮೂಲ ಪುರಷ ಸಿದ್ದಪ್ಪ, ಸಿದ್ದಪ್ಪರವರಿಗೆ ಎಷ್ಟು ಆಸ್ತಿ ಇತ್ತು ನನಗೆ ಗೊತ್ತಿಲ್ಲ. ನಾಗಮಣಿ ಆಸ್ತಿ ಖರೀದಿ ಮಾಡಿದ ಖರೀದಿ ಪತ್ರಕ್ಕೆ ನಾನು ಸಾಕ್ಷಿದಾರನಲ್ಲ. ಖರೀದಿ ಆದ ಸಮಯದ ಸಂಗತಿಗಳ ಬಗ್ಗೆ ವೈಯಕ್ತಿಕ ಮಾಹಿತಿ ನನಗೆ ಇಲ್ಲ.

ನಾಗಮಣಿಗೆ ಆರೋಗ್ಯ ಸರಿಯಿಲ್ಲದೆ ಇದ್ದಾಗ ಅವರ ತಂದೆ ಅವಳ ವ್ಯವಸ್ಥೆ ಮಾಡುತ್ತಿದ್ದರು ಮತ್ತು ಆಸ್ಪತ್ರೆಗೆ ಖರ್ಚು ಮಾಡಿದರು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ನಾಗಮಣಿ 5 ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ದಾನ ಪತ್ರಕ್ಕೆ ನಾನು ಸಾಕ್ಷಿದಾರನಲ್ಲ. ನಾಗಮಣಿ ದಾನ ಮಾಡಿದ ಆಸ್ತಿಯನ್ನು ಖರೀದಿ ಮಾಡಿದ್ದಳು. ಖರೀದಿ ಮಾಡಿದಾಗ ನಾನು ಇರಲಿಲ್ಲ. ಖರೀದಿ ಹಣಪಾವತಿ ಮಾಡುವಾಗ ನಾನು ಇರಲಿಲ್ಲ. ಪಾಲು ಪತ್ರ ಕ್ಕೆ ನಾನು ಸಹಿ ಮಾಡಿಲ್ಲ. ವಿಭಾಗದ ಬಗ್ಗೆ ಮತ್ತು ಯಾರು ಯಾರಿಗೆ ಎಷ್ಟು ಆಸ್ತಿಗಳು ಬಂದವು ಎಂದು ನನಗೆ

OS No. 11/2024
DW-3

ವೈಯಕ್ತಿಕ ಮಾಹಿತಿ ಇಲ್ಲ, ನನಗೆ ವಾದಿ ಮತ್ತು ಪ್ರತಿವಾದಿಯರ ನಡುವೆ ಇರುವ ವಾಜ್ಯದ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇಲದಿದ್ದರು ಕೂಡ ಪ್ರತಿವಾದಿಯರಿಗೆ ಸಾಹಯ ಮಾಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**